ಇ) ಇಂತಹ ಲೋಪಗಳು ಕಂಡುಬಂದಲ್ಲಿ ಬೆಂಗಳೂರು ಹಾಪ್ ಕಾಮ್ಸ್ ಸೇರಿದಂತೆ ಎಲ್ಲಾ ಜಿಲ್ಲಾ ಹಾಪ್‌ಕಾಮ್ಸ್‌ಗಳಲ್ಲಿ ಅಂತಹ ನೌಕರರ ವಿರುದ್ಧ ಅಮಾನತ್ತು ಸೇರಿದಂತೆ ಶಿಸ್ತಿನ ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತಿದೆ.

**ರಾಜ್ಯದಲ್ಲಿರುವ ಕೃಷಿ ವಿಜ್ಞಾನ ಕಾಲೇಜುಗಳು**

**1015 (922) ಶ್ರೀ ಹೆಚ್.ಡಿ. ರೇವಣ್ಣ (ಹೊಳೇನರಸೀಪುರ) :** ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಕೃಷಿ ವಿಜ್ಞಾನ ಕಾಲೇಜುಗಳ ಸಂಖ್ಯೆ ಎಷ್ಟು, ಈ ಕಾಲೇಜುಗಳು ಯಾವ ಯಾವ ವಿಶ್ವವಿದ್ಯಾನಿಲಯದ ವ್ಯಾಪ್ತಿಗೆ ಬರುತ್ತವೆ; ಕೃಷಿ ವಿಶ್ವವಿದ್ಯಾನಿಲಯಗಳ ಹೆಸರು, ಸ್ಥಳ, ಪ್ರತಿ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ ಹಾಗೂ ಅದಕ್ಕೆ ಅನುಗುಣವಾಗಿ ಬೋಧಕ/ಬೋಧಕೇತರರ ಸಂಖ್ಯೆ ಎಷ್ಟು (ಪೂರ್ಣ ಮಾಹಿತಿ ನೀಡುವುದು);

ಆ) ಈಗಿರುವ ಕೃಷಿ ವಿಜ್ಞಾನ ಕಾಲೇಜುಗಳನ್ನು ಬೇರ್ಪಡಿಸಿ ಹೊಸದಾಗಿ ಮತ್ತೊಂದು ಕೃಷಿ ವಿಶ್ವವಿದ್ಯಾನಿಲಯವನ್ನು ಸ್ಥಾಪಿಸುವ ಉದ್ದೇಶ ಸರ್ಕಾರಕ್ಕಿದೆಯೇ; ಹಾಗಿದ್ದಲ್ಲಿ, ಹೊಸ ಕೃಷಿ ವಿಶ್ವವಿದ್ಯಾನಿಲಯ ಸ್ಥಾಪಿಸುವು ದರಿಂದ ಸರ್ಕಾರಕ್ಕೆ ಆರ್ಥಿಕ ಹೊರೆಯಾಗುವುದಿಲ್ಲವೇ?

**ಶ್ರೀ ಉಮೇಶ್ ಕತ್ತಿ (ಕೃಷಿ ಸಚಿವರು) :**

ಅ) ಕರ್ನಾಟಕ ರಾಜ್ಯದಲ್ಲಿ ಬೆಂಗಳೂರು, ಧಾರವಾಡ ಮತ್ತು ರಾಯಚೂರುಗಳಲ್ಲಿ ಮೂರು ಕೃಷಿ ವಿಶ್ವವಿದ್ಯಾಲಯಗಳು ಪ್ರಸ್ತುತ ಅಸ್ತಿತ್ವ ದಲ್ಲಿದ್ದು ಈ ಮೂರು ಕೃಷಿ ವಿಶ್ವವಿದ್ಯಾಲಯಗಳಡಿ ಒಟ್ಟು 14 ಕಾಲೇಜು ಗಳಿವೆ. ಉಳಿದ ವಿವರಗಳನ್ನು ಇದರ ಕೆಳಗೆ ವಿಶ್ವವಿದ್ಯಾಲಯಾವಾರು ನೀಡಲಾಗಿದೆ:-

ಬೆಂಗಳೂರು ಕೃಷಿ ವಿಶ್ವವಿದ್ಯಾಲಯ

| ಕಾಲೇಜಿನ ಹೆಸರು ಸ್ಥಳ | ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ | ಮಂಜೂರಾದ ಬೋಧಕರ ಸಂಖ್ಯೆ | ಮಂಜೂರಾದ ಬೋಧಕೇತರ ಸಿಬ್ಬಂದಿಯ ಸಂಖ್ಯೆ |
|---|---|---|---|
| ಜಿ.ಕೆ.ವಿ.ಕೆ., ಬೆಂಗಳೂರು (ಕೃಷಿ) | 1618 | 185 | 242 |
| ನವಿಲೆ– ಶಿವಮೊಗ್ಗ (ಕೃಷಿ) | 362 | 42 | 51 |
| ಹಾಸನ (ಕೃಷಿ) | 591 | 57 | 62 |
| ಮಂಡ್ಯ (ಕೃಷಿ) | 314 | 42 | 53 |
| ಚಿಂತಾಮಣಿ (ರೇಷ್ಮೆ) | 312 | 62 | 49 |
| ಮೊನ್ನಂಪೇಟೆ (ಅರಣ್ಯ) | 183 | 45 | 35 |
| ಒಟ್ಟು | **3380** | **433** | **492** |

ಧಾರವಾಡ ಕೃಷಿ ವಿಶ್ವವಿದ್ಯಾಲಯ

| ಕಾಲೇಜಿನ ಹೆಸರು ಸ್ಥಳ | ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ | ಮಂಜೂರಾದ ಬೋಧಕರ ಸಂಖ್ಯೆ | ಮಂಜೂರಾದ ಬೋಧಕೇತರ ಸಿಬ್ಬಂದಿಯ ಸಂಖ್ಯೆ |
|---|---|---|---|
| ಧಾರವಾಡ (ಕೃಷಿ) | 1549 | 116 | 87 |
| ಬಿಜಾಪುರ (ಕೃಷಿ) | 429 | 47 | 66 |
| ಹನುಮನಮಟ್ಟಿ | 50 | ಸದ್ಯಕ್ಕೆ ನಿಯೋಜನೆ | |

| (ಕೃಷಿ) | | ಮುಖಾಂತರ ಅವಶ್ಯ ಬೊಧಕ/ಬೋಧಕೇತರ ಸಿಬ್ಬಂದಿಯನ್ನು ನಿಯೋಜಿಸಲಾಗಿದೆ. | |
|---|---|---|---|
| ಧಾರವಾಡ (ಗೃಹ ವಿಜ್ಞಾನ) | 321 | 23 | 14 |
| ಶಿರಸಿ (ಅರಣ್ಯ) | 229 | 21 | 29 |
| ಒಟ್ಟು | 2578 | 207 | 196 |

ರಾಯಚೂರು ಕೃಷಿ ವಿಶ್ವವಿದ್ಯಾಲಯ

| ಕಾಲೇಜಿನ ಹೆಸರು ಸ್ಥಳ | ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ | ಮಂಜೂರಾದ ಬೋಧಕರ ಸಂಖ್ಯೆ | ಮಂಜೂರಾದ ಬೋಧಕೇತರ ಸಿಬ್ಬಂದಿಯ ಸಂಖ್ಯೆ |
|---|---|---|---|
| ರಾಯಚೂರು (ಕೃಷಿ) | 426 | 64 | 59 |
| ಭೀ.ರಾ. ಗುಡಿ (ಕೃಷಿ) | 270 | 35 | 69 |
| ರಾಯಚೂರು (ಕೃಷಿ ತಾಂತ್ರಿಕ) | 217 | 25 | 27 |
| ಒಟ್ಟು | 913 | 124 | 155 |

ಆ) ದಿನಾಂಕ: 26–11–2010ರ ಅಧಿಸೂಚನೆ ಸಂಖ್ಯೆ: ಕೃತೋಇ 74 ಕೃವಿವಿ 2010 ರಲ್ಲಿ ಪ್ರಸ್ತುತ ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ ಆಡಳಿತ ನಿಯಂತ್ರಣಕ್ಕೆ ಒಳಪಟ್ಟಿರುವ 17 ಜಿಲ್ಲೆಗಳ ಪೈಕಿ 7 ಜಿಲ್ಲೆಗಳನ್ನು ಪ್ರಸ್ತಾಪಿತ – ನೂತನ ಶಿವಮೊಗ್ಗ ಕೃಷಿ ವಿಶ್ವವಿದ್ಯಾಲಯದ ವ್ಯಾಪ್ತಿಗೆ ಒಳಪಡಿಸಲಾಗಿದೆ. ಮಲೆನಾಡಿನಲ್ಲಿ ವಿಶಿಷ್ಟ ಬೆಳೆಗಳ ಅಧ್ಯಯನ ಹಾಗೂ ಸಂಶೋಧನೆಗಾಗಿ ಪ್ರತ್ಯೇಕ ಕೃಷಿ ವಿಶ್ವವಿದ್ಯಾಲಯವನ್ನು ಶಿವಮೊಗ್ಗದಲ್ಲಿ ಸ್ಥಾಪಿಸಲು ಸರ್ಕಾರ ನಿರ್ಣಯಿಸಿದ್ದು ಇದಕ್ಕಾಗಿ ಅಗತ್ಯವಾದ ಅನುದಾನವನ್ನು

ಆಯವ್ಯಯದಲ್ಲಿ ನಿಗಧಿಪಡಿಸಲಾಗಿದ್ದು ಕೃಷಿ ಮತ್ತು ತೋಟಗಾರಿಕಾ ವಿಜ್ಞಾನಗಳ ಎರೆಡೂ ಕಾಯ್ದೆಗಳಿಗೆ ತಿದ್ದುಪಡಿ ಆದನಂತರ ಈ ನೂತನ ಕೃಷಿ ವಿಶ್ವವಿದ್ಯಾಲಯವು ಕಾನೂನು ಬದ್ಧವಾಗಿ ಅಸ್ತಿತ್ವಕ್ಕೆ ಬರುತ್ತದೆ.

**ಹೊಸದಾಗಿ ಕಾಮಗಾರಿಗಳ ಯೋಜನೆ**

**1016 (646) ಶ್ರೀ ರುದ್ರೇಶಗೌಡ. ವೈ.ಎನ್. (ಬೇಲೂರು) :** ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 2011–12ನೇ ಸಾಲಿನ 5054 ಯೋಜನೆಯಡಿ ಈ ಸಾಲಿನಲ್ಲಿ ಹೊಸದಾಗಿ ಕಾಮಗಾರಿಗಳನ್ನು ತೆಗೆದುಕೊಳ್ಳುವ ಯೋಜನೆ ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಕಾಮಗಾರಿಗಳನ್ನು ಹೊಸದಾಗಿ ತೆಗೆದುಕೊಳ್ಳುವ ಯೋಜನೆ ಇದ್ದರೆ ಇದುವರೆವಿಗೂ ಕ್ರಿಯಾ ಯೋಜನೆಯನ್ನು ಏಕೆ ತಯಾರಿಸಿರುವುದಿಲ್ಲ;

ಇ) ಆರ್ಥಿಕ ವರ್ಷಾಂತ್ಯಕ್ಕೆ ಕ್ರಿಯಾ ಯೋಜನೆಯನ್ನು ತಯಾರಿಸುವುದರಿಂದ ಕಾಮಗಾರಿಗಳನ್ನು ಪೂರ್ಣಗೊಳಿಸಲು ಸಾಧ್ಯವಿರುವುದಿಲ್ಲ ನಿಜವೇ;

ಈ) ಹಾಗಿದ್ದಲ್ಲಿ, ಯಾವಾಗ ಕ್ರಿಯಾ ಯೋಜನೆ ತಯಾರಿಸಲಾಗುವುದು (ವಿವರ ನೀಡುವುದು)?

**ಶ್ರೀ ಸಿ.ಎಂ.ಉದಾಸಿ (ಲೋಕೋಪಯೋಗಿ ಸಚಿವರು) :**

ಅ) 2011–12ನೆ ಸಾಲಿನ ಲೆಕ್ಕ ಶೀರ್ಷಿಕೆ–5054 ಇತರೆ ರಸ್ತೆ ನಿರ್ಮಾಣ ಅಡಿಯಲ್ಲಿ ದಕ್ಷಿಣ ವಲಯ ಹಾಗೂ ಉತ್ತರವಲಯದ ಎಲ್ಲಾ ವಿಭಾಗಗಳಲ್ಲಿ ಹೊಸ ಕಾಮಗಾರಿಗಳನ್ನು ತೆಗೆದುಕೊಳ್ಳುವ ಉದ್ದೇಶದಿಂದ ಯೋಜನೆಯನ್ನು ಕೈಗೆತ್ತಿಕೊಳ್ಳಲಾಗಿದೆ.

ಆ) ಈಗಾಗಲೇ ಕ್ರಿಯಾ ಯೋಜನೆಯನ್ನು ತಯಾರಿಸಿ ಆರ್ಥಿಕ ಇಲಾಖೆಯ ಸಹಮತಿಯನ್ನು ಪಡೆಯಲಾಗಿರುತ್ತದೆ.

ಇ) ಆರ್ಥಿಕ ಇಲಾಖೆಯಿಂದ 2011–12ನೇ ಸಾಲಿನ ಆಯವ್ಯಯದಲ್ಲಿ ಇಲಾಖೆಗೆ ಒದಗಿಸಲಾದ ಅನುದಾನದ ಕೊರತೆಯಿಂದಾಗಿ ಹೊಸ ಕಾಮಗಾರಿಗಳ ಕ್ರಿಯಾ ಯೋಜನೆಯನ್ನು ಆರ್ಥಿಕ ವರ್ಷದ ಪ್ರಾರಂಭಿಕ ಹಂತದಲ್ಲಿ ಕೈಗೆತ್ತಿಕೊಂಡಿರುವುದಿಲ್ಲ. ಈಗ ಆರ್ಥಿಕ ಇಲಾಖೆಯಿಂದ